**CW : 13**

PW : 9

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.229/2023

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರೀಮತಿ ಗೀತಾ ಬಿ ಎಸ್ |
| ಗಂಡನ ಹೆಸರು | : | ಅಶೋಕ ಎ |
| ಪ್ರಾಯ | : | 40 ವರ್ಷ |
| ಉದ್ಯೋಗ | | ಪಂಚಾಯಿತಿ ಅಬಿವೃದ್ದಿ ಅಧಿಕಾರಿ, ಕಳಂಜ ಗ್ರಾಮಪಂಚಾಯಿತಿ |
| ವಾಸಸ್ಥಳ | : | ಮುಕ್ರಂಪಾಡಿ |

ದಿನಾಂಕಃ**17.03.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ದಿ.16-8-2021 ರಿಂದ 2-8-23 ರ ವರೆಗೆ ಮುಂಡೂರು ಗ್ರಾಮಪಂಚಾಯಿತಿಯಲ್ಲಿ ಪಿ ಡಿ ಒ ಎಂದು ಕರ್ತವ್ಯ ನಿರ್ವಹಿಸಿದ್ದೇನೆ.

ಸಂಪ್ಯ ಪೋ ಠಾಣೆಯ ಪಿ ಎಸ್ ಐ ರವರು ಚಾಸಾ-1 ರವರ ಮನೆಯ ಮಾಲಿಕತ್ವದ ಸಂಬಂಧಿತ ಮತ್ತು ಮನೆ ನಂ. ಸಂಬಂಧಿತವಾಗಿ ದೃಢಪತ್ರವನ್ನು ನೀಡುವಂತೆ ಕೋರಿದ್ದರು. ನಾನು ಅದರ ಸಂಬಂಧಿತವಾಗಿ ದೃಢಪತ್ರವನ್ನು ನೀಡಿರುತ್ತೇನೆ. ಸದರಿ ದೃಡಪತ್ರದಲ್ಲಿ 1-44ಪಿ ಮನೆ ನಂ. ಪಂಚಾಯಿತಿ ಆಸ್ತಿ ದಾಖಲಾತಿ ವಹಿ ಪ್ರಕಾರ ಭಾಸ್ಕರ ಆಚಾರ್ ಹೆಚ್ ಬಿನ್ ರಾಜಗೋಪಾಲಾಚಾರ್ ರವರ ಹೆಸರಿನಲ್ಲಿ ಇದ್ದು ಅವರ ಮಾಲಿಕತ್ವದಲ್ಲೇ ಇರುತ್ತದೆ ಎಂದು ನಮೂದಿಸಲಾಗಿದೆ.

ಸಾಕ್ಷಿಯು ದೃಡಪತ್ರವನ್ನು ಹಾಗೂ ಅದರಲ್ಲಿನ ತನ್ನ ಸಹಿಯನ್ನು ಗುರುತಿಸಿದ್ದು ದೃಡಪತ್ರವನ್ನು ನಿಪಿ.11 ಎಂದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.11ಎ ಎಂದು ಗುರುತಿಸಲಾಯಿತು.

ಪಾಟೀ ಸವಾಲುಃಆರೋಪಿತರ ಪರ ಶ್ರೀ ಎಮ್ ಪಿ ಕೆ ವಕೀಲರಿಂದಃ

ಮನೆ ನಂ.1-44ಬಿ ಯಲ್ಲಿ ಚಾಸಾ-1 ವಾಸ್ತವ್ಯ ಇರುವ ಬಗ್ಗೆ ಅವರಿಂದ ದಾಖಲೆ ಪಡೆದಿಲ್ಲ. ಚಾಸಾ-1 ರವರು ಮನೆ ನಂ.1-44ಬಿ ಯಲ್ಲಿ ವಾಸ್ತವ್ಯವೇ ಇಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**CW : 13**

PW : 9

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

1 ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.